ಖರ್ಚಿಗೆ ಹೇಳಿ ಒಂದು ಲಕ್ಷ ಕೊಡು. ಬಿಸಿನೆಸ್ ಎಲ್ಲಾ ಆ ಮೇಲೆ ಕಾಂಬೋ' ಅಂತ ಹೇಳಿ ಹಲ್ಕಿರಿದ. 'ಬಡ್ಡಿ ಮಗನೆ, ಚೈನಿ ಹೊಡೂಲೇನೋ? ಕೊಡ್ತೆ ಬಿಡು, ಈಗಲ್ದೇ ಇನ್ನು ಯಾವಾಗ ಮಜಾ ಮಾಡ್ತೆ ಹೇಳು?' ಅಂತ ಹುಬ್ಬು ಹಾರಿಸಿದ.

ಮರುದಿನ ಬೆಳಿಗ್ಗೆ ಹಿರಿಯಣ್ಣ ಬೀರುವಿನಲ್ಲಿದ್ದ ಪ್ಯಾಂಟ್ – ಶರ್ಟ್‌ನ್ನು ಹೊರತೆಗೆಯುವಷ್ಟರಲ್ಲಿ ಅನಸೂಯ ಬಂದು, 'ಎಲ್ಲಿಗ್ರೋ ಸವಾರಿ?' ಅಂತ ಕಕ್ಕುಲಾತಿಯಿಂದ ಪ್ರಶ್ನಿಸಿದಳು. 'ಅಲ್ಲಾ, ನೀವು ಯಂತಕ್ಕೆ ಹೇಳಿ ಹೋಪಲ್ಲಿಗಿಟ್ಟ ಪ್ಯಾಂಟ್–ಶರ್ಟ ಹೊರತೆಗೆದ್ರಿ? ಎಲ್ಲಾದ್ರೂ ಮದುವೆ, ಮುಂಜಿ, ಗೃಹಪ್ರವೇಶ?' ಹಿರಿಯಣ್ಣ ಮಡದಿಯ ಹತ್ತಿರ ಬಂದು ಅಕ್ಕರೆಯಿಂದ ಆಕೆಯ ಹೆಗಲಮೇಲೆ ಕೈಯಿಟ್ಟು ಹೇಳಿದ: 'ಅನು, ನಿನ್ನ ಗಂಡ ಆಯುಷ್ಯಪೂರ್ತಿ ಲೆಕ್ಕಾಚಾರ ಮಾಡ್ತಾನೇ ಬದುಕೋ ಹೇಳಿ ಇದ್ದೋ ಹೇಂಗ್? ಒಂದು ಸಲ ಆದ್ರೂ ನಂಗೆ ಧೂಮ್ – ಧಾಮ್ ಹೇಳಿ ಬದುಕೋ ಆಸೆ ಇರ್ತಿಲ್ಯನೇ? ಪೇಟೆ ಕಡೆ ಹೋಪೀಲೆ ಹಳೆವಸ್ತ್ರವೇ ಸಾಕು, ಈ ಹೊಸಬಟ್ಟೆಯೆಲ್ಲಾ ಯಂತಕ್ಕೆ ಹೇಳೂದೇ ನಿನ್ನ ಪ್ರಶ್ನೆ, ಅಲ್ಲಾ? ನೋಡು ಇನ್ನು ಕೆಲವೇ ದಿವಸದಲ್ಲಿ ನಾನು ಕೋಟ್ಯಧೀಶ, ಯಾರು ಹೇಳು? ಕೋಟ್ಯಧೀಶ! ಅಂಥವ ಹಳೇ ಬಟ್ಟೆ ಹಾಕ್ಕಂಡು ಹೊರಬಿದ್ರೆ ಜನ ಛೀ–ತೂ ಹೇಳಿ ಕ್ಯಾಕರಿಸಿ ಉಗುಳ್ತೋ, ತಿಳ್ಕಾ. ಈಗ ನಮಗೊಂದು ಲೆವೆಲ್ ಬಂದು. ಸೊಲ್ಪಾದ್ರೂ ಗತ್ತ – ಗಮ್ಮತ್ತು ತೋರ್ಸೋ, ಮರೆಯಡ' ಅಂತ ಠೀವಿಯಿಂದ ಹೇಳಿದ. ಅಷ್ಟರಲ್ಲಿ ಒಳಬಂದ ಶ್ರೀಕಂಠ, 'ಅಪ್ಪಯ್ಯ, ಅದೆಲ್ಲಾ ಹೌದು, ಆ ಕೋಟಿ ಹಣ ಕೈ ಸೇರೂದು ಯಾವಾಗ? ಏನ್ಕತೆ? ನಿಂಗೊತ್ತಿದ್ದಾನಾ?' ಅಂತೆಲ್ಲ ಸಂಶಯ ವ್ಯಕ್ತಪಡಿಸಿದ. ಹಿರಿಯಣ್ಣ ಇದ್ದ ನಾಲ್ಕು ಮತ್ತೊಂದು ಕೂದಲಿಗೇ ಬಾಚಣಿಕೆ ತೋರಿಸುತ್ತ ಹೇಳಿದ; 'ಮಗನೇ, ವಯಸ್ಸು ಮೂವತ್ತಾಗ್ತಾ ಬಂದ್ರೂ ನಿಂಗಿನ್ನೂ ಗೌರ್‌ಮೆಂಟ್ ವ್ಯವಹಾರ ಗೊತ್ತಿಲ್ಲೆ. ನಂಗೆ ಬಂದಿದ್ದು ಗೌರ್‌ಮೆಂಟ್ ರಿಜಿಸ್ಟರ್ಡ್ ಪತ್ರ. ಅದರ ಮೇಲೆ ಸೀಲು, ತಾರೀಕು, ಸಾಹೇಬ್ರ ಸಹಿ ಎಲ್ಲಾ ಇದ್ದು. ಇದು ನಂಗೆ ಎಪ್ಪೋ ಕೋಟಿ – ಕೋಟಿ ಹಣದ ಪಕ್ಕಾ ಪುರಾವೆ, ತಿಳ್ಕೋ. ಬಂದ್ರೆ ಬಂತು ಹೋದ್ರೆ ಹೋತು ಹೇಳೂಲೆ ಅದೇನು ಲಾಟ್ರಿ ಟಿಕೇಟ್ ಹೇಳಿ ಮಾಡದ್ಯನ? ಬುದ್ದು ನನ್ಮಗನೆ, ಏನೇನೋ ಮಾತಾಡಡ!' ಅಂತೆಲ್ಲಾ ಹೇಳಿ ಹಿರಿಯಣ್ಣ ಚಪ್ಪಲಿ ಮೆಟ್ಟಿ ಗತ್ತಿನಿಂದ ರಸ್ತೆಗಿಳಿದ.

ಹೀಗೆ ಮನೆಯಿಂದ ಹೊರಬಿದ್ದ ಹಿರಿಯಣ್ಣ ಎರಡೂವರೆ ಕಿ.ಮೀ. ದೂರದಲ್ಲಿದ್ದ ಬ್ಯಾಂಕಿಗೆ ಓಡುನಡಿಗೆಯಲ್ಲಿ ಹೋದವನೇ ಅಪತ್ಕಾಲಕ್ಕೆ ಅಂತ ಕಾಪಿಟ್ಟ ಇಪ್ಪತ್ತೈದು ಸಾವಿರ ರೂಪಾಯಿ ಫಿಕ್ಸ್‌ಡ್ ಡೆಪಾಸಿಟ್ ನಗದೀಕರಿಸಿಕೊಳ್ಳಲು ಅನುವಾದ. ಮ್ಯಾನೇಜರ್ ಸಾಹೇಬರು 'ಏನ್ರೀ ಹಿರಿಯಣ್ಣ, ಎಫ್.ಡಿ. ಹಣ ಈಗಲೇ ಯಾಕೆ ತಗಳ್ತಿದೀರಾ? ಬಡ್ಡಿ ಲಾಸ್ ಆಗುತ್ತೆ' ಅಂದರು. ಇವ 'ಆಗಲಿ ಬಿಡಿ ಸಾರ್ ಅದೇನ್ ಮಹಾ? ಕೆಲವೇ ದಿವಸಗಳಲ್ಲಿ ನಾನು ಕೋಟ್ಯಧೀಶನಾಗ್ತೇನೆ, ನೋಡ್ತಿರಿ' ಅನ್ನುತ್ತ ಹೈವೇ ಪ್ರಕರಣವನ್ನು ತಿಳಿಸಿದ. ಉಲ್ಲಸಿತರಾದ ಮ್ಯಾನೇಜರ್ ಎದ್ದು ನಿಂತು ಇವನಿಗೆ 'ಕಂಗ್ರಾಟ್ಸ್' ಹೇಳಿ 'ಆ ಹಣ ನಮ್ಮಲ್ಲೇ ಡಿಪಾಸಿಟ್ ಇಡಿ. ನಾನು ನಿಮ್ಮ ಮನೆಗೆ ಬಂದು ಫಾರ್ಮ್ ತುಂಬಿಸಿಕೊಳ್ತೀನಿ' ಅಂತ ಮಂದಹಾಸ ಬೀರಿದರು. ಇವ 'ಆಯ್ತು ನೋಡೋಣ' ಅಂತ ಹೊರಡಲು ಅನುವಾಗುತ್ತಿದ್ದಂತೆಯೇ ಮ್ಯಾನೇಜರ್ ನಿಧಾನವಾಗಿ ಹೇಳಿದರು. 'ಸರಕಾರದಿಂದ ಹಣ ಬಂದ ಮೇಲೇ ನೀವು ಈ ಎಫ್.ಡಿ.ಯನ್ನು ಎನ್‌ಕ್ಯಾಶ್ ಮಾಡಬಹುದಾಗಿತ್ತು. ವಿಚಾರ ಮಾಡಿ.' ಹಿರಿಯಣ್ಣ ಸುಮ್ಮನೇ ನಕ್ಕು ಹಣದೊಂದಿಗೆ ಹೊರಬಿದ್ದ. ಹೆಂಡತಿಗೊಂದು ಎರಡೂವರೆ ಸಾವಿರದ ರೇಶ್ಮೆ ಸೀರೆ, ಮಗನಿಗೊಂದು ಜೀನ್ಸ್–